2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 88/2022

| | | |
|---|---|---|
| ಸಾಕ್ಷಿದಾರರ ಹೆಸರು | - ಗೌತಮ್ | ಪಿಡಬ್ಲೂ - 1 |
| ತಂದೆಯ ಹೆಸರು | - ಲೋಕಪ್ಪಗೌಡ | ಸಿಡಬ್ಲೂ - 1 |
| ವಯಸ್ಸು | - 31 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಬಾಳೆಹೊನ್ನೂರು | |

ದಿನಾಂಕಃ 02.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಗಾನವಿ ನನ್ನ ತಂಗಿ. 1 ನೇ ಆರೋಪಿ ಗಾನವಿಯ ಗಂಡ, 2 ಮತ್ತು 3 ನೇ ಆರೋಪಿತರು ಆಕೆಯ ಅತ್ತೆ ಮತ್ತು ಮಾವ. ಚಾಸಾ.4 ಮತ್ತು ಚಾಸಾ.5 ರವರು ಗೊತ್ತು, ಅವರು ನಮ್ಮ ಊರಿನವರು. ಚಾಸಾ.10 ನನ್ನ ತಂದೆ. ಚಾಸಾ.11 ನನ್ನ ತಾಯಿ.

2. ನಮ್ಮ ತಂದೆ ತಾಯಿಗೆ ನಾವು ಒಟ್ಟು ಇಬ್ಬರು ಮಕ್ಕಳು. ಅವರೆಂದರೆ ನಾನು ಮತ್ತು ಮೃತ ಗಾನವಿ. ದಿನಾಂಕ 20.02.2021 ರಂದು ನನ್ನ ತಂಗಿ ಗಾನವಿಯ ಮದುವೆಯನ್ನು ಬಾಳೆಹೊನ್ನೂರಿನ ಚರ್ಚ್ ಹಾಲಿನಲ್ಲಿ 1 ನೇ ಆರೋಪಿಯೊಂದಿಗೆ ಹಿರಿಯರು ನಿಶ್ಚಯಿಸಿ ನೆರವೇರಿಸಿದ್ದರು. ಮದುವೆಯ ಮಾತುಕತೆಯಲ್ಲಿ ಆರೋಪಿತರು 150 ಗ್ರಾಂ ತೂಕದ ಚಿನ್ನವನ್ನು ನನ್ನ ತಂಗಿ ಗಾನವಿಗೆ ಕೊಡುವಂತೆ ಕೇಳಿದ್ದರು. ಅದರಂತೆ ನಾವು 150 ಗ್ರಾಂ ತೂಕದ ಚಿನ್ನವನ್ನು ನನ್ನ ತಂಗಿ ಗಾನವಿಗೆ ಕೊಟ್ಟಿದ್ದೆವು. ಆರೋಪಿತರು

ವರದಕ್ಷಿಣೆಗಾಗಿ 2 ಲಕ್ಷ ಹಣವನ್ನು ಕೊಡುವಂತೆ ಕೇಳಿದ್ದರು. ಅದರಂತೆ ಸದರಿ ಹಣವನ್ನು ಮದುವೆಯ ಹಾಲಿನಲ್ಲಿ ನನ್ನ ತಂದೆ ಆರೋಪಿತರಿಗೆ ಕೊಟ್ಟಿದ್ದಾರೆ. ಸದರಿ ಚಿನ್ನ ಮತ್ತು ವರದಕ್ಷಿಣೆಗಾಗಿ ಕೊಟ್ಟ 2 ಲಕ್ಷ ಹಣವನ್ನು ಹೊರತುಪಡಿಸಿ ಸುಮಾರು 10 ಲಕ್ಷ ಹಣವನ್ನು ಖರ್ಚು ಮಾಡಿ ನನ್ನ ತಂದೆ ನನ್ನ ತಂಗಿ ಗಾನವಿಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಮಾಡಿಕೊಟ್ಟಿದ್ದರು.

3. ಮದುವೆಯಾದ ಬಳಿಕ ನನ್ನ ತಂಗಿ ಮಾಕೋನಹಳ್ಳಿಯಲ್ಲಿರುವ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು. ಮದುವೆಯಾದ 2-3 ತಿಂಗಳ ಕಾಲ ಆರೋಪಿತರು ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡರು. ನಂತರ 1 ನೇ ಆರೋಪಿ ಮತ್ತು ಆತನ ತಂದೆ ತಾಯಿ ಗಾನವಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಕೊಡಲು ಪ್ರಾರಂಭಿಸಿದರು.

4. ತವರುಮನೆಯಿಂದ ಇನ್ನೂ ಹೆಚ್ಚಿಗೆ 5 ಲಕ್ಷ ಹಣವನ್ನು ವರದಕ್ಷಿಣೆಯಾಗಿ ತರುವಂತೆ 1 ನೇ ಆರೋಪಿ ಮತ್ತು ಆತನ ತಂದೆ ತಾಯಿ ನನ್ನ ತಂಗಿಗೆ ಹಿಂಸೆ ಕೊಡುತ್ತಿದ್ದರು. ಸದರಿ ವಿಚಾರವನ್ನು ನನ್ನ ತಂಗಿ ನನಗೆ ಮತ್ತು ನನ್ನ ತಂದೆ ತಾಯಿಗೆ ಫೋನ್ ಮಾಡಿ ಸದರಿ ವಿಚಾರವನ್ನು ತಿಳಿಸಿದ್ದಳು. ಸದರಿ ವಿಚಾರವಕ್ಕೆ 1 ನೇ ಆರೋಪಿ ತನಗೆ ಹೊಡೆಯುತ್ತಿದ್ದಾಗಿ ನನ್ನ ತಂಗಿ ನಮಗೆ ತಿಳಿಸಿದ್ದಳು. ಆಗ ನಾವು ಆಕೆಗೆ ಇರಲಿ ನೋಡೋಣ ಸ್ವಲ್ಪ ಅಡ್ಜೆಸ್ಟ್ ಮಾಡಿಕೊಂಡು ಹೋಗು ಎಂದು ಹೇಳುತ್ತಿದ್ದೆವು ಮತ್ತು ಆರೋಪಿತರಿಗೂ ಸಹ ನನ್ನ ತಂಗಿಗೆ ಹೊಡೆದು ಬಡಿದು ಮಾಡಿ ಮಾನಸಿಕ ಹಿಂಸೆ ಕೊಡಬೇಡಿ ಎಂದು

ಕೇಳಿಕೊಂಡಿದ್ದೆವು.ಆದರೂ ಸಹ ಆರೋಪಿತರು ನನ್ನ ತಂಗಿಗೆ ಹಿಂಸೆ ಕೊಡುವುದನ್ನು ಮುಂದುವರೆಸಿದ್ದರು.

5. ನನ್ನ ತಂಗಿ ಮೃತಪಡುವ 6 ತಿಂಗಳ ಹಿಂದೆ ಆರೋಪಿತರು ಆಕೆಗೆ ನೀಡುತ್ತಿದ್ದ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ತಾಳಲಾರದೇ ಮತ್ತು ಅವರು ಆಕೆಗೆ ಸರಿಯಾಗಿ ಊಟ ತಿಂಡಿಯನ್ನು ನೀಡದಿದ್ದ ಕಾರಣಕ್ಕೆ ತನ್ನ ಗಂಡನ ಮನೆಯನ್ನು ಬಿಟ್ಟು ನಮ್ಮ ಮನೆಗೆ ಬಂದಿದ್ದಳು. ಆ ಸಮಯದಲ್ಲಿ ನನ್ನ ತಂಗಿ 2 ತಿಂಗಳ ಕಾಲ ನಮ್ಮ ಮನೆಯಲ್ಲಿಯೇ ಇದ್ದಳು. ಆಗ ನಾವು ಆಕೆಗೆ ಗಂಡನ ಮನೆಗೆ ಹೋಗಿ ಇರುವಂತೆ ಹೇಳಿದಾಗ ಆಕೆ ಅವರು ಹಿಂಸೆ ಕೊಡುತ್ತಾರೆ ನಾನು ಅಲ್ಲಿಗೆ ಹೋಗುವುದಿಲ್ಲವೆಂದು ಹೇಳುತ್ತಿದ್ದಳು.

6. ನನ್ನ ತಂಗಿ ಮೃತಪಡುವ 2 ತಿಂಗಳ ಹಿಂದೆ 1 ನೇ ಆರೋಪಿ ನಮ್ಮ ಮನೆಗೆ ಬಂದು ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಮತ್ತು ಆಕೆಗೆ ಹಿಂಸೆ ಕೊಡುವುದಿಲ್ಲವೆಂದು ಹೇಳಿ ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಆಗ ಸ್ವಲ್ಪ ದಿನಗಳ ಕಾಲ ಆರೋಪಿತರು ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡರು. ನಂತರ ಪುನಃ ಅವರು ನನ್ನ ತಂಗಿಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಕೊಡುವುದನ್ನು ಮುಂದುವರೆಸಿದರು.

7. ನನ್ನ ತಂಗಿಯ ಬಳಿ ಇದ್ದ ಮೊಬೈಲ್ ನಿಂದ ಆಕೆ ನಮಗೆ ಕರೆ ಮಾಡುತ್ತಿದ್ದರಿಂದ ಆಕೆ ನಮಗೆ ಕರೆ ಮಾಡಬಾರದೆಂದು 1 ನೇ ಆರೋಪಿ ಸದರಿ ಮೊಬೈಲನ್ನು ಕಿತ್ತುಕೊಂಡಿದ್ದನು. ಅದಕ್ಕೂ ಮೊದಲು ನನ್ನ ತಂಗಿ ಸದರಿ ಮೊಬೈಲ್ ನಿಂದ 2 ನೇ ಆರೋಪಿ

ತನಗೆ ಬೈಯ್ಯುವುದನ್ನು ಮತ್ತು ಆಕೆಗೆ ಹೊಡೆಯಲು ಆಕೆಯನ್ನು ಓಡಿಸಿಕೊಂಡು ಬರುವುದನ್ನು ವೀಡಿಯೋ ಮಾಡಿಕೊಂಡಿದ್ದಳು. ಆ ವಿಚಾರವನ್ನು ನನ್ನ ತಂಗಿ ಫೋನ್ ಮಾಡಿದಾಗ ನನಗೆ ತಿಳಿಸಿದ್ದಳು. ಆ ರೀತಿ ಆಕೆ ವೀಡಿಯೋ ರೆಕಾರ್ಡ್ ಮಾಡಿಕೊಂಡಿದ್ದರಿಂದ 1 ನೇ ಆರೋಪಿ ಸದರಿ ಮೊಬೈಲನ್ನು ಕಿತ್ತುಕೊಂಡಿದ್ದನು.

8. ಈಗ್ಗೆ 1 ವರ್ಷದ ಹಿಂದೆ ಒಂದು ದಿನ ನಾನು ಮನೆಯಲ್ಲಿ ಇದ್ದೆನು. ಆಗ 1 ನೇ ಆರೋಪಿ ನನ್ನ ತಂದೆಗೆ ಫೋನ್ ಮಾಡಿ ನನ್ನ ತಂಗಿ ಗಾನವಿಗೆ ಹುಷಾರಿಲ್ಲವೆಂದು ತಿಳಿಸಿ ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಾಗಿ ಹೇಳಿ ಅಲ್ಲಿಗೆ ಬರುವಂತೆ ತಿಳಿಸಿದರು. ಆಗ ನನ್ನ ತಂದೆ ಸದರಿ ಆಸ್ಪತ್ರೆಗೆ ಹೋದರು. ನನ್ನ ತಂದೆ ಅಲ್ಲಿಗೆ ಹೋದಾಗ ಆರೋಪಿತರು ನೀಡುತ್ತಿದ್ದ ಕಿರುಕುಳದಿಂದಾಗಿ ನನ್ನ ತಂಗಿ ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾಗಿ ತಿಳಿದುಬಂದಿದ್ದಾಗಿ ನನ್ನ ತಂದೆ ನನಗೆ ಫೋನ್ ಮಾಡಿ ತಿಳಿಸಿದರು.

9. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಬರುವ ಮೊದಲು 1 ನೇ ಆರೋಪಿ ನನ್ನ ತಂಗಿಯನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ತಿಳಿಯಿತು. ನನ್ನ ತಂದೆ ಫೋನ್ ಮಾಡಿದ ಕೂಡಲೇ ನಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಹೋದೆನು. ಅಲ್ಲಿ ನನ್ನ ತಂದೆ ಮತ್ತು 1 ನೇ ಆರೋಪಿ ಇದ್ದರು. ಆಗ ನನ್ನ ತಂಗಿ ಮಾತನಾಡುವ ಸ್ಥಿತಿಯಲ್ಲಿ ಇದ್ದಳು ಆದರೆ ಸುಸ್ತಾಗಿದ್ದಳು. ಅಲ್ಲಿ ನಾನು ನನ್ನ ತಂಗಿಯನ್ನು ವಿಚಾರಿಸಿದಾಗ

ಆಕೆ 1 ನೇ ಆರೋಪಿ ಮತ್ತು ಆತನ ತಂದೆ ತಾಯಿಯ ಕಿರುಕುಳದಿಂದಾಗಿ ತಾನು ವಿಷವನ್ನು ಸೇವಿಸಿರುವುದಾಗಿ ಹೇಳಿದಳು.

10. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಿಂದ ನನ್ನ ತಂಗಿಯನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಆಕೆಯನ್ನು ನಾನು ಮತ್ತು ನನ್ನ ತಂದೆ ಉಡುಪಿಯ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ನನ್ನ ತಂಗಿಗೆ ಚಿಕಿತ್ಸೆ ಕೊಡಲಾಯಿತು. ಮೊದಲಿಗೆ ನನ್ನ ತಂಗಿ ಸ್ವಲ್ಪ ಚೆನ್ನಾಗಿದ್ದಳು ನಂತರ ಆಕೆ ಸುಸ್ತಾದಳು. ಆಗ ನನ್ನ ತಂಗಿ ನನ್ನ ಜೀವಕ್ಕೆ ಏನಾದರೂ ಆದರೆ ಅದಕ್ಕೆ ಆರೋಪಿತರೇ ಕಾರಣರೆಂದು ನನಗೆ ತಿಳಿಸಿದಳು. ಮಧ್ಯಾಹ್ನ 3.00 ಗಂಟೆಗೆ ಚಿಕಿತ್ಸೆಗೆ ಸ್ಪಂದಿಸದೇ ನನ್ನ ತಂಗಿ ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಳು.

11. ನಂತರ ನಾನು ಮೂಡಿಗೆರೆ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

12. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

13. ನಿಪಿ.1 ದೂರನ್ನು ನಾನು ಟೈಪ್ ಮಾಡಿಸಿಕೊಂಡು ಹೋಗಿ ಪೊಲೀಸರಿಗೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಆರೋಪಿ ನ್ಯಾಯಾಂಗ ಬಂಧನದಲ್ಲಿರುವ ಬೇರೊಂದು ಪ್ರಕರಣದಲ್ಲಿ ಸಾಕ್ಷ್ಯ ವಿಚಾರಣೆ ಬಾಕಿ ಇರುವುದರಿಂದ ಮತ್ತು ನ್ಯಾಯಾಲಯದ ಅವಧಿ ಮುಗಿಯುತ್ತಾ ಬಂದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್